**Spl.C. 3/2020.**

# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ, ಇವರ ನ್ಯಾಯಾಲಯದಲ್ಲಿ.

## ವಿಶೇಷ ಸತ್ರ ಮೊಕದ್ದಮೆ ಸಂಖ್ಯೆ 3/2020.

| | | | |
|---|---|---|---|
| ಹೆಸರು | : | ಅನಿಲ @ ರೇವಪ್ಪ ಚಿಂಚಲಿ | ಫ್ರಾಸಾ-25 |
| ತಂದೆಯ ಹೆಸರು | : | ಮುತ್ತಪ್ಪ | ಚಾಸಾ-47 |
| ವಯಸ್ಸು | : | 30 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಾಸಸ್ಥಳ | : | ಶಿರೋಳ, ತಾಃ ಮುಧೋಳ | |

ದಿನಾಂಕಃ 13-11-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ಆರೋಪಿ-1 ಪರಿಚಯ. ಉಳಿದ ಆರೋಪಿತರು ಪರಿಚಯವಿಲ್ಲ. ನನ್ನ ಮೊಬೈಲ್ ಸಂಖ್ಯೆ 9731160151 ಇರುತ್ತದೆ. ನಾನು ಯಾವತ್ತೂ ಪೋಲಿಸಠಾಣೆಗೆ ಹೋಗಿಲ್ಲ. ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾ.ಅ.ರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಪ್ರತಿಕೂಲ ಸಾಕ್ಷ್ಯ ನೀಡಿರುವುದು ಮನದಟ್ಟಾಗಿರುವುದರಿಂದ, ಕೋರಿರುವ ಅನುಮತಿಯನ್ನು ನೀಡಲಾಯಿತು)

**ಪಾಟಿಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ.**

ನಾನು ಶಿರೋಳ ಗ್ರಾಮದವನು. ಚಾಸಾ-1 ಪರಿಚಯವಿಲ್ಲ. ದಿನಾಂಕಃ 15.10.2019 ರಂದು 3.30 ಗಂಟೆ ಸುಮಾರಿಗೆ ನಾನು ತೋಟದಲ್ಲಿ ಕೆಲಸ ಮಾಡುವಾಗ ಮಲ್ಲಪ್ಪ ಹುದ್ದಾರ ನನಗೆ ಫೋನ್ ಮಾಡಿದ್ದ ಎನ್ನುವುದು ಸರಿಯಲ್ಲ. ತಳಗೇರಿ ಕುಟುಂಬದವರು ಟ್ರ್ಯಾಕ್ಟರ್ ಹಾಯಿಸಿದ ವಿಷಯದಲ್ಲಿ ಕೇಸ ಮಾಡಲು ಹೋಗಿದ್ದಾರೆ, ಅಲ್ಲಿಗೆ ಗೌಡರು ಹೋಗಿದ್ದಾರೆ, ನೀನು ಬಾ ಎಂದು ಹೇಳಿದರು

ಎನ್ನುವುದು ಸರಿಯಲ್ಲ. ನಾನು ಆಯಿತು ಅಂತಾ ಹೇಳಿ ಅಲ್ಲಿಗೆ ಹೋಗದೇ ಮನೆಯಲ್ಲಿದ್ದೆ ಎನ್ನುವುದು ಸರಿಯಲ್ಲ.

ದಿನಾಂಕಃ 30-11-2019 ರಂದು ಈಗ ಓದಿ ಹೇಳಿದ ನಿಪಿ-51 ರಂತೆ ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

(ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು)

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

13-11-2024.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.

**Spl.C. 3/2020.**

# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ, ಇವರ ನ್ಯಾಯಾಲಯದಲ್ಲಿ.

**ವಿಶೇಷ ಸತ್ರ ಮೊಕದ್ದಮೆ ಸಂಖ್ಯೆ 3/2020.**

| | | | |
|---|---|---|---|
| ಹೆಸರು | : | ಸೈಯದಸಾಬ ನದಾಫ್ | ಫ್ರಾಸಾ-24 |
| ತಂದೆಯ ಹೆಸರು | : | ಹುಸೇನಸಾಬ್ | ಚಾಸಾ-36 |
| ವಯಸ್ಸು | : | 32 ವರ್ಷ | |
| ಉದ್ಯೋಗ | : | ಕೂಲಿ | |
| ವಾಸಸ್ಥಳ | : | ಶಿರೋಳ, ತಾಃ ಮುಧೋಳ | |

ದಿನಾಂಕಃ 13-11-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ಆರೋಪಿತರು ಪರಿಚಯವಿಲ್ಲ. ನನಗೆ ಆಟೋ ಚಾಲನಾಪತ್ರವಿಲ್ಲ. ನಾನು ಬೆಳಗ್ಗೆ 6.00 ಗಂಟೆಯಿಂದ ಶಿರೋಳದಿಂದ ಮುಧೋಳಕ್ಕೆ ಆಟೋ ಓಡಿಸುತ್ತೇನೆ. ನನ್ನ ಆಟೋದಲ್ಲಿ ಮಕ್ಕಳು, ದೊಡ್ಡವರು, ಶಾಲೆಗೆ ಹೋಗುವವರು, ಕರಾಟೆಗೆ ಹೋಗುವವರು ಬರುತ್ತಾರೆ ಎಂದರೆ ಬರಬಹುದು. ಘಟನೆ ಬಗ್ಗೆ ನನಗೆ ಮಾಹಿತಿ ಇಲ್ಲ. ಘಟನೆ ಕುರಿತು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾ.ಅ.ರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಪ್ರತಿಕೂಲ ಸಾಕ್ಷ್ಯ ನೀಡಿರುವುದು ಮನದಟ್ಟಾಗಿರುವುದರಿಂದ, ಕೋರಿರುವ ಅನುಮತಿಯನ್ನು ನೀಡಲಾಯಿತು)

**ಪಾಟಿಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ.**

ನಾನು ಪ್ರತಿದಿನ 10.00 ರಿಂದ 10.30 ಗಂಟೆವರೆಗೆ 10 ರಿಂದ 12 ಮಕ್ಕಳನ್ನು ಕರಾಟ್ಟೆ ಕ್ಲಾಸಗೆ ಕರೆದುಕೊಂಡು ಹೋಗಿ ಬಿಡುತ್ತಿದ್ದೆ ಎನ್ನುವುದು ಸರಿಯಲ್ಲ. ದಿನಾಂಕಃ 15.10.2019 ರಂದು ಬೆಳಗ್ಗೆ 10.30 ಗಂಟೆಗೆ ನಾನು ರೇಣುಕಾ @ ರೇಖಾ ಇವಳನ್ನು

ಮುಧೋಳದ ಕ್ಲಾಸಗೆ ಕರೆದುಕೊಂಡು ಹೋಗಿ ಬಿಟ್ಟಿದ್ದೇನೆ ಎನ್ನುವುದು ಸರಿಯಲ್ಲ, ಏಕೆಂದರೆ ನನ್ನ ಆಟೋದಲ್ಲಿ ಬಂದವರ ಹೆಸರು ನನಗೆ ಗೊತ್ತಿಲ್ಲ. ಸದರಿ ಆಟೋದಲ್ಲಿ ಕಾಡಪ್ಪ ತಳಗೇರಿ ಮತ್ತು ಪ್ರದೀಪ ರವರನ್ನು ಕರೆದುಕೊಂಡು ಹೋಗುತ್ತಿದ್ದೆ ಎನ್ನುವುದು ಸರಿಯಲ್ಲ. ದಿನಾಂಕಃ 30-11-2019 ರಂದು ಈಗ ಓದಿ ಹೇಳಿದ ನಿಪಿ-50 ರಂತೆ ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

(ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು)

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

13-11-2024.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.

# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ, ಇವರ ನ್ಯಾಯಾಲಯದಲ್ಲಿ.

## ವಿಶೇಷ ಸತ್ರ ಮೊಕದ್ದಮೆ ಸಂಖ್ಯೆ 3/2020.

| | | | |
|---|---|---|---|
| ಹೆಸರು | : | ಶಂಕರ ಲಕ್ಕಪ್ಪಗೋಳ | ಫ್ರಾಸಾ-23 |
| ತಂದೆಯ ಹೆಸರು | : | ಗಂಗಪ್ಪ | ಚಾಸಾ-33 |
| ವಯಸ್ಸು | : | 29 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಾಸಸ್ಥಳ | : | ಕುಳಲಿ, ತಾಃ ಮುಧೋಳ | |

ದಿನಾಂಕಃ 13-11-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ಆರೋಪಿತರು ಪರಿಚಯವಿಲ್ಲ. ಚಾಸಾ-1 ನನ್ನ ಚಿಕ್ಕಪ್ಪ. ಚಾಸಾ-21,24 ರಿಂದ 26 ನನ್ನ ಸಂಬಂಧಿಕರು.

ದಿನಾಂಕಃ 30-11-2019 ರಂದು ನಾನು ತೇರದಾಳದಿಂದ ಬರುತ್ತಿರುವಾಗ ಸಾಯಂಕಾಲ 7.00 ಗಂಟೆಗೆ ವಿಠ್ಠಲ ರವರಿಗೆ ಅಪಘಾತವಾಗಿದೆ ಎಂದು ಹೇಳಿದರು. ನಾನು ಘಟನಾ ಸ್ಥಳಕ್ಕೆ ಹೋಗಿದ್ದೆ. ಅಲ್ಲಿ ನೋಡಲಾಗಿ ಮಲ್ಲಪ್ಪ ಮತ್ತು ವಿಠ್ಠಲ ಇವರ ಕೊಲೆಯಾಗಿತ್ತು. ಯಲ್ಲಪ್ಪ ತಳಗೇರಿ ಇವರ ಜೊತೆಗೆ ಪೋಲಿಸಠಾಣೆಗೆ ಹೋಗಿದ್ದೆ. ಯಲ್ಲಪ್ಪ ಹೇಳಿದಂತೆ ನಾನು ಪಿರ್ಯಾದಿ ಬರೆದಿದ್ದೇನೆ. ಪಿರ್ಯಾದಿ ನೋಡಿದೆ ಅದನ್ನು ಈಗಾಗಲೇ ನಿಪಿ-1 ಅಂತಾ ಗುರುತಿಸಲಾಗಿದ್ದು, ಸಹಿಯನ್ನು ನಿಪಿ-1(ಬಿ) ಅಂತಾ ಗುರುತಿಸಲಾಯಿತು.

**ಪಾಟಿಸವಾಲುಃ ಆರೋಪಿತರ ಪರ ಶ್ರೀ. ಎಸ್.ಸಿ.ಹೆಚ್ ವಕೀಲರಿಂದ.**

ನಾನು ಹಾಗೂ ಚಾಸಾ–1 ಸಂಬಂಧಿಕರು. ಪಿರ್ಯಾದಿ ನೀಡಲು ಠಾಣೆಗೆ 4 ಜನರು ಹೋಗಿದ್ದೆವು. ಪಿರ್ಯಾದಿಯನ್ನು ಚಾಸಾ–1 ಹೇಳಿದಂತೆ ಬರೆದಿದ್ದೇನೆ. ನಾನು ಹಾಗೂ ಚಾಸಾ–1 ಸೇರಿ ಆರೋಪಿತರ ವಿರುದ್ಧ ಸುಳ್ಳು ಪಿರ್ಯಾದಿ ದಾಖಲಿಸಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

13–11–2024.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಬಾಗಲಕೋಟೆ.